# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ವಿಭಾಗೀಯ ನಿಯಂತ್ರಣಾಧಿಕಾರಿಗಳ ಕಛೇರಿ, ಕ.ರಾ.ರ.ಸಾರಿಗೆ ನಿಗಮ, ಚಿತ್ರದುರ್ಗ ವಿಭಾಗ.

ಸಂಖ್ಯೆ:ಕರಾಸಾ/ಚಿವಿ/ಸಂಚಾರ/ವಾಣಿಜ್ಯ/ /18-19 ದಿನಾಂಕ :30-08-2018

## ಸಂಧಾನ ಪ್ರಕಟಣೆ ಸಂ: 04 : 2018

ಕ.ರಾ.ರ.ಸಾ.ನಿಗಮ ಚಿತ್ರದುರ್ಗ ವಿಭಾಗದ ಈ ಕೆಳಗಿನ ಬಸ್ಸು ನಿಲ್ದಾಣದಲ್ಲಿರುವ ಶಾಶ್ವತ ಮಳಿಗೆಗಳಿಗೆ 5 ವರ್ಷ ಮತ್ತು ತೆರೆದ ಜಾಗಕ್ಕೆ 3ವರ್ಷಗಳ ಅವಧಿಗೆ ಪರವಾನಿಗೆದಾರರನ್ನು ಆಯ್ಕೆ ಮಾಡಲು ಪ್ರತೀ ವರ್ಷ ಶೇ10ರ ಪರವಾನಿಗೆ ಶುಲ್ಕದ ಹೆಚ್ಚಳದೊಂದಿಗೆ ಪರವಾನಿಗೆದಾರರನ್ನು ಮೊಕ್ತಾ ಅಭಿಪ್ರಾಯ ಸಂಗ್ರಹಣೆಯ(ಸಂಧಾನದ) ಮೂಲಕ ಆಯ್ಕೆ ಮಾಡಲು ಉದ್ದೇಶಿಸಲಾಗಿದೆ. ಅವಧಿ ಮುಗಿದ ನಂತರ ಹೊಸದಾಗಿ ಟೆಂಡರ್ ಪ್ರಕಟಣೆ ಹೊರಡಿಸಲಾಗುವುದು. ವಿವರ ಈ ಕೆಳಗಿನಂತಿದೆ.

| ಕ್ರ. ಸಂ | ಬಸ್ಸು ನಿಲ್ದಾಣದ ಹೆಸರು | ವಾಣಿಜ್ಯ ಮಳಿಗೆಯ ಹೆಸರು | ಕನಿಷ್ಟ ಮಾಸಿಕ ಪರವಾನಿಗೆ ಶುಲ್ಕ ರೂ. ಗಳಲ್ಲಿ | ಮಳಿಗೆಯ ಮಾದರಿ | ಖಾಲಿ ಆಗುವ ದಿನಾಂಕ | ಇಎಂಡಿ ಹಣ ರೂ ಗಳಲ್ಲಿ | ಸಂಧಾನದ ಅರ್ಜಿ ಶುಲ್ಕ ರೂ.ಗಳಲ್ಲಿ | ವಿಸ್ತೀರ್ಣ ಚದರ ಅಡಿಗಳಲ್ಲಿ |
|---|---|---|---|---|---|---|---|---|
| 1 | ಚಿತ್ರದುರ್ಗ | ಮಳಿಗೆ ಸಂಖ್ಯೆ-08 (ಜ್ಯೂಸ್ ಸ್ಟಾಲ್ ) | 48365/- | ತೆರೆದ& 3 ವರ್ಷ | ಖಾಲಿ ಇದೆ | 145095/- | 634/- | 70 |
| 2 | ಭರಮಸಾಗರ | ಉಪಹಾರ ಗೃಹ | 5400/- | ಶಾಶ್ವತ& 5 ವರ್ಷ | ಖಾಲಿ ಇದೆ | 16200/- | 118/- | 683 |
| 3 | ಭರಮಸಾಗರ | ಮಳಿಗೆ ಸಂಖ್ಯೆ-02 ಜನರಲ್ ಸ್ಟಾಲ್ | 585/- | ಶಾಶ್ವತ& 5 ವರ್ಷ | ಖಾಲಿ ಇದೆ | 1755/- | 118/- | 115 |
| 4 | ಭರಮಸಾಗರ | ಮಳಿಗೆ ಸಂಖ್ಯೆ-04 ಜನರಲ್ ಸ್ಟಾಲ್ | 585/- | ಶಾಶ್ವತ& 5 ವರ್ಷ | ಖಾಲಿ ಇದೆ | 1755/- | 118/- | 115 |
| 5 | ಹಿರಿಯೂರು | ಮಳಿಗೆ ಸಂಖ್ಯೆ-01 ಜನರಲ್ ಸ್ಟಾಲ್ | 34,100/- | ಶಾಶ್ವತ& 5 ವರ್ಷ | ಖಾಲಿ ಇದೆ | 102300/- | 402/- | 158.19 |
| 6 | ಸಿರಿಗೆರೆ | ಜನರಲ್ ಸ್ಟಾಲ್ | 1,025/- | ಶಾಶ್ವತ& 5 ವರ್ಷ | ಖಾಲಿ ಇದೆ | 3075/- | 118/- | 36.39 |
| 7 | ಶಿರಾ | ಮಳಿಗೆ ಸಂಖ್ಯೆ-11 ಎಸ್‌ಸಿ | 7200/- | ತೆರೆದ& 3 ವರ್ಷ | ಖಾಲಿ ಇದೆ | 21600/- | 118/- | 8*8=64 |
| 8 | ಚಳ್ಳಕೆರೆ | ಮಳಿಗೆ ಸಂಖ್ಯೆ-28 ಕಛೇರಿ ಸ್ಥಳ(1ನಜಿಟಅ) | 65,268 | ಶಾಶ್ವತ&10 ವರ್ಷ | ಖಾಲಿ ಇದೆ | 1,95,304 | 771 | 5926 |
| 9 | ಚಳ್ಳಕೆರೆ | ಮಳಿಗೆ ಸಂಖ್ಯೆ-9 ಲಗೇಜ್ ರೂಂ | 4676/- | ಶಾಶ್ವತ& 5 ವರ್ಷ | ಖಾಲಿ ಇದೆ | 14028/- | 118/- | 171.72 |

ಸಂಧಾನದ ಅರ್ಜಿ ಫಾರಂ, ಷರತ್/ನಿಯಮಾವಳಿಗಳನ್ನು ದಿನಾಂಕ: **01-09-2018 ರಿಂದ ದಿ:21-09-2018ರ** 12.00 ಗಂಟೆಯವರೆಗೆ ಈ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಸದರಿ ಮಳಿಗೆಗಳನ್ನು ನಡೆಸಲು ಆಸಕ್ತರು, ನಿಗದಿಪಡಿಸಿದ ಇ.ಎಂ.ಡಿ ಮೊತ್ತಕ್ಕೆ ಡಿ.ಡಿ.ಯನ್ನು Divisional Controller, K.S.R.T.C, chitradurga Division ಇವರ ಹೆಸರಿಗೆ ಪಡೆದು, ಸದರಿ ಡಿ.ಡಿ. ಮೂಲ ಪ್ರತಿಯೊಂದಿಗೆ ತಮ್ಮ ಸಂಧಾನ ಅರ್ಜಿ ಫಾರಂ, ಗುರುತಿನ ಚೀಟಿ ಮತ್ತು ಮನವಿ ಪತ್ರದೊಂದಿಗೆ ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ, ಚಿತ್ರದುರ್ಗ ಇವರ ಕಛೇರಿಯಲ್ಲಿ

ದಿನಾಂಕ:**22-09-2018**ರಂದು ಸಮಯ **12.00 ಗಂಟೆಗೆ** ನಡೆಯಲಿರುವ ಸಂಧಾನದಲ್ಲಿ ಭಾಗವಹಿಸಿ ನಿಗಮದ ನಿಯಮಗಳನ್ನು ಪಾಲಿಸಿ ಪರವಾನಿಗೆದಾರರಾಗಿ ಆಯ್ಕೆಯಾಗಬಹುದಾಗಿರುತ್ತದೆ. ಸಂಸ್ಥೆಯ ನಿಯಮಾವಳಿಗಳ ಬಗ್ಗೆ ಮಾಹಿತಿಯನ್ನು ಈ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆದು ಸಂಧಾನದಲ್ಲಿ ಭಾಗವಹಿಸುವುದು.

ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಚಿತ್ರದುರ್ಗ ವಿಭಾಗ-577501 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ದೂರವಾಣಿ ಸಂಖ್ಯೆ-9606908962

-ಸಹಿ-

ವಿಭಾಗೀಯ ನಿಯಂತ್ರಣಾಧಿಕಾರಿ,
ಕರಾರಸಾನಿಗಮ ಚಿತ್ರದುರ್ಗ ವಿಭಾಗ

ಪ್ರತಿಯನ್ನು ವಂದನೆಗಳೊಂದಿಗೆ, ಮುಖ್ಯ ಸಂಚಾರ ವ್ಯವಸ್ಥಾಪಕರು (ವಾ), ಕರಾರಸಾಸಂಸ್ಥೆ, ಕೇಂದ್ರ ಕಛೇರಿ ಬೆಂಗಳೂರು ರವರ ಅವಗಾಹನೆಗೆ ಕಳುಹಿಸಲಾಗಿದೆ

ಪ್ರತಿಯನ್ನು ವಂದನೆಗಳೊಂದಿಗೆ ಎಲ್ಲಾ ಹಿರಿಯ/ವಿಭಾಗ ನಿಯಂತ್ರಣಾಧಿಕಾರಿ, ಕರಾರಸಾನಿ/ಈಕರಸಾನಿ/ ವಾಕರಸಾನಿ/ ಬೆಂಮಸಾನಿ ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.

ಪ್ರತಿಯನ್ನು ವಿಭಾಗದ ಎಲ್ಲಾ ಘಟಕ ವ್ಯವಸ್ಥಾಪಕರು, ನಿಲ್ದಾಣ ಮೇಲ್ವಿಚಾರಕರು, ವಾಹನ ನಿಲ್ದಾಣ ಇವರ ಮಾಹಿತಿಗಾಗಿ ಕಳುಹಿಸುತ್ತಾ ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಬಸ್ ನಿಲಾಂಣಗಳಲ್ಲಿ ಸದರಿ ಪ್ರಕಟಣೆಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಿ ಸಾರ್ವಜನಿಕರ ಗಮನಕ್ಕೆ ತರುವುದು ಹಾಗೂ ವ್ಯಾಪಕ ಪ್ರಚಾರ ಮಾಡುವುದು.

ಪ್ರತಿಯನ್ನು ವಿಭಾಗ ಸಂಚಾಲನಾಧಿಕಾರಿ/ಸಹಾಯಕ ಲೆಕ್ಕಾಧಿಕಾರಿ/ ಉಪಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿ/ ಸಕಾನಿಅ/ ಚಿತ್ರದುರ್ಗ ಇವರ ಗಮನಕ್ಕೆ ಹಾಗೂ ದಿ:**24-09-2018**ರಂದು 11.00 ಗಂಟೆಗೆ ನಡೆಯುವ ಸಂಧಾನ ಸಭೆಗೆ ಹಾಜರಾಗುವುದು.

ಪ್ರತಿಯನ್ನು ಆಡಳಿತಾಧಿಕಾರಿ, ಕರಾರಸಾ.ನಿಗಮ, ಚಿತ್ರದುರ್ಗ ವಿಭಾಗ ಇವರ ಗಮನಕ್ಕೆ ಕಳುಹಿಸಲಾಗಿದೆ.

ಪ್ರತಿಯನ್ನು ವಿಭಾಗೀಯ ಭದ್ರತಾ ನಿರೀಕ್ಷಕರ ಗಮನಕ್ಕೆ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ ಹಾಗೂ ದಿ:2**4-09-2018**ರಂದು 11.00 ಗಂಟೆಗೆ ನಡೆಯುವ ಸಂಧಾನ ಸಭೆಗೆ ಹಾಜರಾಗುವುದು.

ಪ್ರತಿಯನ್ನು ವಿಭಾಗದ ಎಲ್ಲಾ ಸಂಚಾರ ನಿಯಂತ್ರಕರುಗಳ ಗಮನಕ್ಕೆ ಹಾಗೂ ಮೇಲಿನ ಪ್ರಕಟಣೆಯನ್ನು ಸೂಚನಾಫಲಕದಲ್ಲಿ ಪ್ರಕಟಿಸಿ ಸಾರ್ವಜನಿಕರ ಗಮನಕ್ಕೆ ತರುವುದು ಹಾಗೂ ಹೆಚ್ಚಿನ ಪ್ರಚಾರ ಮಾಡುವುದು.

-ಸಹಿ-
ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ::ಚಿತ್ರದುರ್ಗ ವಿಭಾಗ

## : ಸಂಧಾನದ ಷರತ್ ನಿಯಮಾವಳಿ ಮತ್ತು ನಿಬಂಧನೆಗಳು :

1. ವಾಣಿಜ್ಯ ಮಳಿಗೆಯನ್ನು ಯಥಾ ಸ್ಥಿತಿಯಲ್ಲಿ ನೀಡಲಾಗುವುದು ಹಾಗೂ ಪ್ರತೀ ವರ್ಷ ಶೇ10ರಷ್ಟು ಪರವಾನಿಗೆ ಶುಲ್ಕವನ್ನು ಹೆಚ್ಚಳ ಮಾಡಲಾಗುವುದು.

2. ಸಂಧಾನದಲ್ಲಿ ಆಯ್ಕೆಗೊಂಡ ಪರವಾನಿಗೆದಾರರು ತಮ್ಮ ಸ್ವಂತ ಖರ್ಚಿನಲ್ಲಿ ಕರ್ನಾಟಕ ಸ್ಟಾಂಪ್ ಆಕ್ಟ್ 1957 ಸೆಕ್ಷನ್ 32(ಎ) (111)ರಲ್ಲಿ ಪರಿಷ್ಕೃತ ಸ್ಟಾಂಪ್ ಆಕ್ಟ್ ಸಂ.8/2003ರ ಪ್ರಕಾರ ಸ್ಟಾಂಪ್ ಶುಲ್ಕ ಭರಿಸಿ ಕರಾರು ಒಪ್ಪಂದ ಮಾಡಿಕೊಳ್ಳಬೇಕಾಗಿರುತ್ತದೆ ಹಾಗೂ ಕೂಡಲೇ ವ್ಯವಹಾರ ಪ್ರಾರಂಭಿಸಬೇಕಾಗಿರುತ್ತದೆ.

3. ಆಯ್ಕೆಗೊಂಡ ಪರವಾನಿಗೆದಾರರು ತಾವು ಸಲ್ಲಿಸಿರುವ ಇ.ಎಂ.ಡಿ. ಹಣವನ್ನು ಹೊಂದಾಣಿಕೆ ಮಾಡಿಕೊಂಡು ಸೂಚಿಸಿರುವ/ಉಳಿಕೆ ಭದ್ರತಾ ಠೇವಣಿ ಮೊತ್ತ, ಪರವಾನಿಗೆ ಶುಲ್ಕದ ಎಂಟು(08) ತಿಂಗಳ ಹಣವನ್ನು ಭದ್ರತಾ ಠೇವಣಿಯಾಗಿ ಸಂಧಾನದಲ್ಲಿ ಆಯ್ಕೆಯಾದ ಕೂಡಲೇ ಡಿ.ಡಿ.ರೂಪದಲ್ಲಿ Divisional Controller, K.S.R.T.C, chitradurga Division ಇವರ ಹೆಸರಿನಲ್ಲಿ ಪಾವತಿಸುವುದು. ನಿಗಧಿತ ಸಮಯದಲ್ಲಿ ಭದ್ರತಾ ಠೇವಣಿ ಪಾವತಿಸಿ ಕರಾರು ಒಪ್ಪಂದ ಮಾಡಿಕೊಳ್ಳಲು ವಿಫಲರಾದಲ್ಲಿ ಅವರು ನೀಡಿರುವ ಇ.ಎಂ.ಡಿಯನ್ನು ಸಂಸ್ಥೆಗೆ ಆಗುವ ನಷ್ಟಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

4. ಕರಾರು ಒಪ್ಪಂದ ಮಾಡಿಕೊಳ್ಳುವ ಸಮಯದಲ್ಲಿ ಸೇಲ್ಸ್ ಟ್ಯಾಕ್ಸ್, ಕ್ಲಿಯರೆನ್ಸ್ ಸರ್ಟಿಫಿಕೇಟ್ ಕಡ್ಡಾಯವಾಗಿ ನೀಡುವುದು.
5. ಆಯ್ಕೆಗೊಂಡ ಪರವಾನಿಗೆದಾರರು ಪಾವತಿಸುವ ಮಾಸಿಕ ಪರವಾನಿಗೆ ಶುಲ್ಕದ ಮೇಲೆ ಸರ್ಕಾರವು ನಿಗದಿಪಡಿಸುವ ಶೇಕಡ ಮೊತ್ತದ ಸೇವಾ ತೆರಿಗೆಯನ್ನು ಪ್ರತೀ ತಿಂಗಳು ಪರವಾನಿಗೆ ಶುಲ್ಕದ ಜೊತೆಗೆ ವಿಳಂಬವಿಲ್ಲದೆ ಪಾವತಿಸಲು ಬದ್ದರಾಗಿರಬೇಕು ಹಾಗೂ ಕಾಲಕಾಲಕ್ಕೆ ಸೇವಾ ತೆರಿಗೆ ಪರಿಷ್ಕರಣೆ ಆದಾಗ ಪಾವತಿಸಲು ಬದ್ಧರಾಗಿರಬೇಕು. ಮತ್ತು ತಮ್ಮ ಮಳಿಗೆಯಲ್ಲಿ ಬೆಂಕಿ ನಂದಿಸುವ ಉಪಕರಣಗಳನ್ನು ಇಟ್ಟುಕೊಳ್ಳಬೇಕು ಮತ್ತು ಬೆಂಕಿ ವಿಮೆಯನ್ನು ಮಾಡಿಸಿಕೊಳ್ಳಬೇಕು.
6. ಸಂಸ್ಥೆಯು ಆಗಿಂದಾಗ್ಗೆ ವಿಧಿಸುವ ಷರತ್ತು/ನಿಯಮಾವಳಿಗಳಿಗೆ ಬದ್ಧರಾಗಿರಬೇಕು.
7. ಪರವಾನಿಗೆದಾರರು ಪರವಾನಗಿ ಮೊತ್ತ ಹಾಗೂ ಇತರೆ ಶುಲ್ಕಗಳನ್ನು ಸತತ 03ತಿಂಗಳು ಪಾವತಿಸದಿದ್ದಲ್ಲಿ ಕರಾರು ಒಪ್ಪಂದ ರದ್ದತಿಯಾಗುತ್ತದೆ.
8. ಭಾರತ ಸರ್ಕಾರ/ಕರ್ನಾಟಕ ಸರ್ಕಾರ/ಕರಾರಸಾನಿಗಮವು ಆಗಿಂದಾಗ್ಗೆ ವಿಧಿಸುವ ಷರತ್ತು/ನಿಬಂಧನೆಗಳಿಗೆ ಪರವಾನಿಗಿದಾರರ ಬದ್ದರಾಗಿರಬೇಕು.
9. ಸಂಸ್ಥೆಯ ಮಾಸಿಕ ಪರವಾನಿಗೆ ಶುಲ್ಕ ಬಾಕಿ ಉಳಿಸಿಕೊಂಡಿರುವವರು ಹಾಗೂ ಕರಾರು ನಿಯಮ ಉಲ್ಲಂಘಿಸಿ ನಿಗಮದಿಂದ ಕರಾರು ಒಪ್ಪಂದ ರದ್ದಾಗಿರುವವರು ಸಂಧಾನದಲ್ಲಿ ಭಾಗವಹಿಸಲು ಅರ್ಹರಲ್ಲ ಹಾಗೂ ಅರ್ಜಿ ಸಲ್ಲಿಸಿದಲ್ಲಿ ಇ.ಎಂ.ಡಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
10. ವಾಣಿಜ್ಯ ಮಳಿಗೆಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.
11. ಮಳಿಗೆಯ ನೀರಿನ ಶುಲ್ಕ/ ವಿದ್ಯುತ್ ಶುಲ್ಕವನ್ನು ಪ್ರತೀ ತಿಂಗಳು ಪರವಾನಿಗೆ ಶುಲ್ಕದೊಂದಿಗೆ ಸಂಬಂಧಪಟ್ಟ ಘಟಕದಲ್ಲಿ ಪರವಾನಗಿದಾರರೇ ಪಾವತಿಸುವುದು.
12. ಆಯ್ಕೆಗೊಂಡ ಪರವಾನಗಿದಾರರು ಮಳಿಗೆಯನ್ನು ಸ್ವತಃ ನಡೆಸುವುದಲ್ಲದೇ ಪರಬಾರೆ ಮಾಡುವಂತಿಲ್ಲ.
13. ಆಯ್ಕೆಗೊಂಡ ಪರವಾನಗಿದಾರರು ಕರಾರು ಒಪ್ಪಂದವನ್ನು ಮಾಡಿಕೊಂಡ ನಂತರವೇ ವಿಫಲರಾದ ಬಿಡ್‌ದಾರರ ಇ.ಎಂ.ಡಿ ಹಣವನ್ನು ಹಿಂತಿರುಗಿಸಲಾಗುವುದು.
14. ವಾಸಸ್ಥಳ ದೃಢೀಕರಣ, ಚಾಲನಾ ಪರವಾನಗಿ, ಆಧಾರ ಕಾರ್ಡ್, ವೋಟರ್ ಕಾರ್ಡ್, ರೇಷನ್ ಕಾರ್ಡ್, ಚಾಲ್ತಿ ದೂರವಾಣಿ ಸಂಖ್ಯೆಯನ್ನು ಸಲ್ಲಿಸುವುದು.
15. ಆಯ್ಕೆಗೊಂಡ ಪರವಾನಗಿದಾರರು ಚಾಲ್ತಿಯಲ್ಲಿರುವ ಮಾಸಿಕ ಪರವಾನಗಿ ಶುಲ್ಕವನ್ನು ಆಯಾ ತಿಂಗಳ 07 ನೇ ತಾರೀಖಿನೊಳಗೆ ಹಾಗೂ ಸೇವಾ ತೆರಿಗೆಯನ್ನು ಆಯಾ ತಿಂಗಳ 05 ನೇ ತಾರೀಖಿನೊಳಗೆ ಸಂಬಂಧಪಟ್ಟ ಘಟಕಗಳಲ್ಲಿ ಮುಂಗಡವಾಗಿ ಸಂದಾಯ ಮಾಡಬೇಕು. ನಿಗಧಿತ ಸಮಯದಲ್ಲಿ ಪಾವತಿಸದೇ ಇದ್ದಲ್ಲಿ ಸಂಬಂಧಿಸಿದ ಬಡ್ಡಿಯನ್ನು ತುಂಬಲು ಬದ್ದರಾಗಿರಬೇಕು.

16. ಉಪಹಾರ ಗೃಹಗಳಲ್ಲಿ ಅಡುಗೆ ಅನಿಲ ಮತ್ತು ವಿದ್ಯುತ್ ಮಾತ್ರ ಉಪಯೋಗಿಸುವುದು.
17. ಮಳಿಗೆಗಳಲ್ಲಿ ಟೂರಿಸ್ಟ್/ಟ್ರಾವೆಲ್ ಏಜೆನ್ಸಿ, ಮದ್ಯಪಾನ, ಮಾಂಸ, ಕಾನೂನು ಬಾಹಿರ ಚಟುವಟಿಕೆಗಳಿರುವ ವ್ಯಾಪಾರ ಮಾರಾಟ ವಸ್ತುಗಳನ್ನು, ಪಟಾಕಿ ಹಾಗೂ ಸ್ಫೋಟಕ ವಸ್ತುಗಳನ್ನು, ವಾಯು ಮಾಲಿನ್ಯ ಮಾಡುವ ವಸ್ತುಗಳನ್ನು ಹಾಗೂ ಸಂಸ್ಥೆಯ ಹಿತಕ್ಕೆ ಧಕ್ಕೆ ಬರುವ ವ್ಯಾಪಾರಗಳಿಗೆ ನಿಷೇಧಿಸಲಾಗಿದೆ.

18. ಆಯ್ಕೆಗೊಂಡ ಪರವಾನಿಗೆದಾರರು ಸಂಧಾನದಲ್ಲಿ ನೀಡಿರುವ/ನಮೂದಿಸಿರುವ ನಿಗದಿ ಪಡಿಸಿದ ಜಾಗದಲ್ಲಿ ವ್ಯಾಪಾರ/ವಹಿವಾಟು ನಡೆಸುವುದು. ನಿಲ್ದಾಣದ ಹೆಚ್ಚುವರಿ ಜಾಗವನ್ನು ಅತಿಕ್ರಮಿಸಲು ಅವಕಾಶವಿರುವುದಿಲ್ಲ.
19. ಆಯ್ಕೆಗೊಂಡ ಪರವಾನಿಗೆದಾರರು ಕರ್ನಾಟಕ ಸರ್ಕಾರವು ಜಾರಿ ಮಾಡಿರುವ 1957ರ ಗ್ರಾಹಕರ ಅಧಿನಿಯಮ– 6/23(1) ನಿಯಮ 23(2) ರ ಅನ್ವಯ ಗ್ರಾಹಕರಿಗೆ ಮಳಿಗೆಯಲ್ಲಿ ಮಾರಾಟ ಮಾಡುವ ವಸ್ತುಗಳ ಮೇಲೆ ತಯಾರಕರು, ನಿರ್ಧಿಷ್ಟ ಪಡಿಸಿದ ಗರಿಷ್ಠ ಬೆಲೆಗೆ ಮಾರಾಟ ಮಾಡಬೇಕಾಗಿರುತ್ತದೆ. ಗರಿಷ್ಠ ಬೆಲೆಯನ್ನು ಅಳಿಸುವುದು/ತಿದ್ದುವುದಾಗಲೀ ಇತ್ಯಾದಿ ದೂರುಗಳು ಬಂದಲ್ಲಿ ನೀಡಲಾದ ಪರವಾನಗಿಯನ್ನು ರದ್ದುಪಡಿಸಲಾಗುವುದು.

20. ಬಾಲ ಕಾರ್ಮಿಕರನ್ನು ನೇಮಿಸಲು ಅವಕಾಶವಿರುವುದಿಲ್ಲ ಮತ್ತು ನಿಗಮವು ಆಗಿಂದಾಗ್ಗೆ ವಿಧಿಸುವ ಷರತ್ತು ನಿಯಮಾವಳಿಗಳಿಗೆ ಬದ್ಧರಾಗಿರಬೇಕು.
21. ಆಯ್ಕೆಯಾದ ಅರ್ಜಿದಾರರೊಂದಿಗೆ ತೆರೆದ ಸ್ಥಳಕ್ಕೆ ಮೂರು(03)ವರ್ಷ, ಶಾಶ್ವತ ಮಳಿಗೆಗಳಿಗೆ ಐದು(05)ವರ್ಷಗಳ ಅವಧಿಗೆ ಕರಾರು ಒಪ್ಪಂದ ಮಾಡಿಕೊಳ್ಳಲಾವುದು.

22. ಬೈಸಿಕಲ್, ದ್ವಿಚಕ್ರ ಮತ್ತು ಕಾರ್ ತಂಗುದಾಣದ ಅವಧಿ ಮೂರು(03)ವರ್ಷದಾಗಿರುತ್ತದೆ. ಆಯ್ಕೆಯಾದ ಪರವಾನಗಿದಾರರು ನಿಗಮವು ನಿಗದಿಪಡಿಸಿದ ದರದಂತೆ ಶುಲ್ಕವನ್ನು ಪಡೆಯುವುದು ಹಾಗೂ ದ್ವಿಚಕ್ರ ಪಾರ್ಕಿಂಗ್‌ಗಳಿಗೆ ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 206 'ಸಿ' ನ ಪ್ರಕಾರ ಟಿ.ಸಿ.ಎಸ್ ಮತ್ತು ಪರವಾನಗಿ ಶುಲ್ಕದ ಮೇಲೆ ಸರ್ಕಾರವು ನಿಗದಿಪಡಿಸಿರುವ ಶೇಕಡಾ ಮೊತ್ತದ ಸೇವಾ ತೆರಿಗೆಯನ್ನು ಪ್ರತೀ ತಿಂಗಳು ನಿಗದಿತ ಅವಧಿಯೊಳಗೆ ಮುಂಗಡವಾಗಿ ಪಾವತಿಸಲು ಬದ್ಧರಾಗಿರಬೇಕು.

23. ವಾಣಿಜ್ಯ ಮಳಿಗೆಗಳಿಗೆ ಸಂಬಂಧಿಸಿದ ವ್ಯವಹಾರಗಳನ್ನು ಪ್ರಾರಂಭಿಸಲು ಕಾನೂನು ರೀತಿಯಲ್ಲಿ ಅಗತ್ಯವಿರುವ ಪರವಾನಗಿಯನ್ನು ಸಂಬಂಧಿಸಿದ ಪ್ರಾಧಿಕಾರಗಳಿಂದ ಪರವಾನಗಿದಾರರು ಪಡೆದುಕೊಳ್ಳತಕ್ಕದ್ದು.

24. ಮಳಿಗೆಯಲ್ಲಿ ಮಾರಾಟ ಮಾಡುವ ಆಹಾರ, ತಿಂಡಿ, ಪದಾರ್ಥ ಸಾಮಾಗ್ರಿ, ನೀರಿನ ಪೊಟ್ಟಣ ಇತ್ಯಾದಿ ವಸ್ತುಗಳನ್ನು ತಯಾರಕರು, ನಿರ್ಧಿಷ್ಟಪಡಿಸಿದ ಬೆಲೆಗೆ ಮಾರಾಟ ಮಾಡುವುದು.

25. ಸಂಧಾನದ ಪ್ರಕಟಣೆಯನ್ನು ಯಾವುದೇ ಕಾರಣ ನೀಡದೆ ಪುರಸ್ಕರಿಸುವ/ ತಿರಸ್ಕರಿಸುವ/ಮಾರ್ಪಾಡು ಮಾಡುವ ಹಾಗೂ ರದ್ದುಪಡಿಸುವ ಹಕ್ಕನ್ನು ನಿಗಮವು ಕಾಯ್ದಿರಿಸಿಕೊಂಡಿದೆ.

ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ::ಚಿತ್ರದುರ್ಗ ವಿಭಾಗ